SERVICE ABOVE SELF

Rotary

विश्वमित्र:

ವಿಶ್ವಮಿತ್ರ

VISHWAMITHRA

Weekly House Bulletin of Rotary Club Shimoga, R.I. Dist. 3182

THE MAGIC OF ROTARY 2024-25

Rtn. Stephanie A. Urchick
RI President 2024-25

Rtn. CA Dev Anand
District Governor 2024-25


Rtn. K. Sooryanarayana Udpa
President, Mob: 99009 66114

Rtn. N.G. Usha
Secretary, Mob : 81975 92278

Rtn. M. Madhavachar
Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –04 ದಿನಾಂಕ : 31–07–2024




## ದಿನಾಂಕ: 31.07.2024 ರ ವಾರದ ಸಭೆಯ ವರದಿ

**2024–25 ನೇ ಸಾಲಿನ ಮೊದಲ ಕೌಟುಂಬಿಕ ಸ್ನೇಹ ಮಿಲನ ಸಭೆ 'ಹಸಿರೇ ಉಸಿರು' ಎಂಬ ವಿನೂತನ ಕಾರ್ಯಕ್ರಮವನ್ನು ಸಭಾಂಗಣದ ಸುತ್ತಲೂ ಹಸಿರು ಗಿಡಗಳಿಂದ ಹಾಗೂ ಮತ್ತಿತರ ಪರಿಕರಗಳೊಂದಿಗೆ ಸಭಾಂಗಣವನ್ನು ಸಿಂಗರಿಸಲಾಗಿತ್ತು. ಇದರಲ್ಲಿ ಪರಿಸರ ಗೀತೆ ಗಾಯನ, ಪರಿಸರ ಕ್ವಿಜ್ ಪರಿಸರ ಕಾಳಜಿ ಯೋಜನೆಗಳ ಮಾಹಿತಿ ನೀಡುವಿಕೆ ಕಾರ್ಯಕ್ರಮವನ್ನು ಮಾಜಿ ಅಧ್ಯಕ್ಷರಾದ ಹಾಗೂ ಪ್ರೋಗ್ರಾಂ ಸಮಿತಿ ಚೇರ್ಮನ್‌ರಾದ ರೊ.ಎನ್.ವಿ.ಭಟ್‌ರವರ ನೇತೃತ್ವದಲ್ಲಿ ಸದಸ್ಯರ ಜೊತೆಗೂಡಿ ಆಯೋಜಿಸಲಾಗಿತ್ತು. ವೇದಿಕೆಯಲ್ಲಿ ಅಧ್ಯಕ್ಷರಾದ ರೊ.ಕೆ. ಸೂರ್ಯ ನಾರಾಯಣ ಉಡುಪ ಮತ್ತು ಕಾರ್ಯದರ್ಶಿ ರೊ.ಎನ್. ಜಿ. ಉಷಾರವರು ಮತ್ತು ರೊ.ಎನ್.ವಿ. ಭಟ್‌ರವರು ಉಪಸ್ಥಿತರಿದ್ದು ಅವರ ನಿರೂಪಣೆ ಯೊಂದಿಗಿನ 'ಹಸಿರೇ ಉಸಿರು' ಕಾರ್ಯಕ್ರಮ ಚೆನ್ನಾಗಿ ಮೂಡಿ ಬಂದು ಸಭೆ ಯಶಸ್ವಿಯಾಯಿತು.**




ಕಾರ್ಯಕ್ರಮದ ಆರಂಭದಲ್ಲಿ ರೊ. ಸುಮಲತಾ ಭೂಪಾಳಂರವರಿಂದ "ದೇವಿ ಭುವನ ಮನ ಮೋಹಿನಿ" ಎಂಬ ಗೀತೆಯ ಸುಶ್ರಾವ್ಯ ಗಾಯನದೊಂದಿಗೆ ಪ್ರಾರ್ಥನೆಯಾಯಿತು. ರೊ. ಸಿ.ಬಿ. ವೀರಣ್ಣರವರಿಂದ ಸ್ವಾಗತವಾಯಿತು. ಟಾಕ್ ಆಫ್ ದಿ ಡೇಕಾರ್ಯಕ್ರಮದಲ್ಲಿ ರೊ. ಟಿ.ಕೆ.ಎಂ. ಭಟ್‌ರವರಿಂದ – ನಮ್ಮ ಕಾಮನೆಗಳು ಮತ್ತು ಅರಿಷ್ಟಡ್ವರ್ಗಗಳ ಸಮರ್ಪಕ ನಿರ್ವಹಣೆ ಹಾಗೂ ಸೀಮಿತವಾದ ಬಯಕೆಯಿಂದಾಗಿ ನಮ್ಮ ಆರೋಗ್ಯ ಸ್ಥಿರವಾಗಿರುತ್ತದೆ ಎಂದರು. ಚಿ. ಧನುಷ್‌ರವರಿಗೆ (ರೊ. ಕಿಶೋರ್ ಶೀರನಾಳಿ ಹಾಗೂ ರೊ. ಸಿ. ಸತೀಷ್‌ಕುಮಾರ್‌ರವರಿಂದ) ವಿದ್ಯಾಭ್ಯಾಸಕ್ಕಾಗಿ ಕೊಡಮಾಡಲ್ಪಟ್ಟ ದೇಣಿಗೆ ಮೊಬಲಗನ್ನು ರೊ. ಕಿಶೋರ್ ಶೀರನಾಳಿಯವರು ನೀಡಿದರು. ಕಾರ್ಯದರ್ಶಿ ರೊ.ಎನ್.ಜಿ. ಉಷಾರವರಿಂದ ಪ್ರಕಟಣೆಯಾಯಿತು. ಇಂದಿನ ಈ ಸಭಾಂಗಣವನ್ನು ಸುಂದರವಾಗಿ ವಿನ್ಯಾಸಗೊಳಿಸಲು ಸಹಕರಿಸಿದ ರೊ. ಸಿ. ವಿಜಯಕುಮಾರ್, ರೊ. ಗಾಯತ್ರಿ ಸುಮತೀಂದ್ರ ಮತ್ತು ರೊ.ರಮಾಗೋಪಾಲ್‌ರವರಿಗೆ ವಂದಿಸಿದರು. ಇದೇ ಸಂದರ್ಭದಲ್ಲಿ ಅಧ್ಯಕ್ಷರ ಸ್ನೇಹಿತರಾದ ಶ್ರೀ ವಾಸುದೇವಾಚಾರ್ ಮತ್ತು ಸುಮಂಗಲಾ ದಂಪತಿಗಳನ್ನು ವೇದಿಕೆಗೆ ಆಹ್ವಾನಿಸಿ ಪುಷ್ಪ ನೀಡಿ ಸಭೆಗೆ




ಪರಿಚಯ ಮಾಡಿದರು. ಖಜಾಂಚಿ ರೊ.ಎಸ್. ಜಿ. ಗೋಪಾಲ್‌ರವರು ಮಾತನಾಡಿ ಸದಸ್ಯತ್ವ ಶುಲ್ಕ ಶೀಘ್ರವಾಗಿ ಪಾವತಿ ಮಾಡಲು ಕೋರಿದರು. ಅಂತೆಯೇ ಒಂದು ಹಾಸ್ಯ ಪ್ರಸಂಗವನ್ನು ಪ್ರಸ್ತುತ ಪಡಿಸಿದರು. ರೊ. ವೀರಣ್ಣ ಎ. ಹುಗ್ಗಿಯವರು ಸದಸ್ಯತ್ವ ವಿಸ್ತರಣೆ ಮತ್ತು ಅಭಿವೃದ್ಧಿ ಸೆಮಿನಾರ್ ಬಗ್ಗೆ ಮತ್ತೊಮ್ಮೆ ರೋಟರಿ ಸದಸ್ಯರ ಗಮನ ಸೆಳೆದರು.

ಮಾಜಿ ಅಧ್ಯಕ್ಷರಾದ ರೊ.ಎನ್.ವಿ.ಭಟ್‌ರವರು ಮಾತನಾಡಿ, ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಪರಿಸರವಿಲ್ಲದೇ ನಾವಿಲ್ಲ. ಅದರಲ್ಲೂ ಮಣ್ಣು ಪರಿಸರದ ಒಂದು ಭಾಗವಾಗಿದ್ದು ಸದ್ಗುರು ಜಗ್ಗಿ ವಾಸುದೇವರವರು ಮಣ್ಣಿನ ಉಳಿಯುವಿಕೆಗಾಗಿ ಕೈಗೊಂಡ ಕಾರ್ಯಕ್ರಮ ನದಿಯ ದಂಡೆಗಳಲ್ಲಿ ಸಸಿ ನೆಡುವ ಕಾರ್ಯಕ್ರಮದ ಬಗ್ಗೆ ತಿಳಿಸಿದರು. ಸುಮಾರು 550 ವರ್ಷಗಳ ಹಿಂದೆ ಪುರಂದರದಾಸರು ಹಾಡಿದ 'ಮಣ್ಣಿಂದ ಕಾಯ ಮಣ್ಣಿಂದ' ಎಂದು ರಚಿಸಿದ ಹಾಡನ್ನು ಹಾಡಿದರು ಅಲ್ಲದೇ ಅಂದೇ ಮಣ್ಣಿನ ಮಹತ್ವವನ್ನು ನಮ್ಮ ಹಿರಿಯರು ಅರಿತಿದ್ದರು ಎಂದರು.

* ರೊ. ಶಾರದಾಗೋಪಾಲ್‌ರವರಿಂದ ಪರಿಸರಗೀತೆ–ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೆ ನಾಲ್ಕು ಹನಿಯ ಚೆಲ್ಲಿ.

* ರೊ. ಎಂ.ವಿ. ನಾಗೇಶ್‌ರವರಿಂದ ಪರಿಸರ ಸಂರಕ್ಷಣೆ ಬಗ್ಗೆ ಮಾಹಿತಿ ಹಾಗೂ ತಾವು ಕೈಗೊಂಡ ಕಾರ್ಯಕ್ರಮಗಳ ಬಗ್ಗೆ ಅವರು

2ನೇ ಪುಟಕ್ಕೆ

## ಈ ವಾರದ ಸಭೆ

**ದಿನಾಂಕ : 07–08–2024 ಬುಧವಾರ** **ಸಂಜೆ 6:15**

**ಅತಿಥಿ: ಪರಿಸರ ನಾಗರಾಜ್, ಶಿವಮೊಗ್ಗ**

**ವಿಷಯ: Soild Waste Management & Importance of Rainwater Harvesting**

**ದಯಮಾಡಿ ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ.**

**ಸ್ಥಳ: ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ

ಮಾತನಾಡುತ್ತಾ, ಪರಿಸರ ಸಂರಕ್ಷಣೆ ಎಂಬುದು ಯಾವುದೋ ಒಂದು ದಿನದ ಆಚರಣೆಯದಲ್ಲ. ಅದು ನಿತ್ಯದ ಆಚರಣೆಯಾಗಬೇಕು. ನಮ್ಮ ದೈನಂದಿನ ಜೀವನದಲ್ಲಿ ಪರಿಸರ ಸಂರಕ್ಷಣೆಗೆ ಆಗಬಹುದಾದ ಪೂರಕ ಕಾರ್ಯಗಳನ್ನು ನಾವು ಅಳವಡಿಸಿಕೊಳ್ಳಬೇಕು. ಪ್ಲಾಸ್ಟಿಕ್ ಬ್ಯಾಗ್‌ಗಳ ಬದಲು ಬಟ್ಟೆಯ ಚೀಲಗಳನ್ನು ಬಳಸಿಕೊಳ್ಳಬೇಕು. ಪ್ಲಾಸ್ಟಿಕ್ ಮಣ್ಣಿನ ಜೊತೆ ಬೆರೆತು ಒಂದಾಗಲು ಸುಮಾರು 400 ವರ್ಷಗಳು ಬೇಕಾದೀತು. ರೈತರ ತ್ಯಾಗಗಳನ್ನು ನಾವು ಅರ್ಥಮಾಡಿಕೊಳ್ಳಬೇಕು. ಆಹಾರವನ್ನು ಚೆಲ್ಲದಂತೆ ನಮ್ಮ ವರ್ತನೆಯಿರಬೇಕು. ಈಗಿನ ಮದುವೆ ಮನೆಯಲ್ಲಿ ಒಂದು ಲೋಡ್ ಪ್ಲಾಸ್ಟಿಕ್ ಸಂಗ್ರಹವಾಗುತ್ತದೆ. ಆದುದರಿಂದ ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಬೇಕು. ಸುಶಿಕ್ಷಿತರಿಂದಲೇ ಈ ಕೆಲಸಗಳಾಗುತ್ತಿದೆ. ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಮೇಲು ಎಂಬಂತಾಗಿದೆ ಇಂದಿನ ಸ್ಥಿತಿ. ಈ ಹಿಂದೆ ನೀರನ್ನು ಯಾರೂ ಮಾರುತ್ತಿರಲಿಲ್ಲ. ಈಗ ಮದುವೆ ಮನೆಗಳಿಗೆ ಹೋದರೆ ನೀರಿನ ಅವ್ಯಾಹತ ಬಳಕೆ ಪ್ಲಾಸ್ಟಿಕ್‌ನೊಂದಿಗೆ ಆಗುತ್ತಿದೆ. ನಾವು ಸರಳ ಜೀವನವನ್ನು ಅಳವಡಿಸಿಕೊಳ್ಳಬೇಕು.

40 ವರ್ಷಗಳ ಹಿಂದೆ ನಾನು ಹಸಿರಿನ ಪರಿಸರದಲ್ಲಿ ಬೆಳೆದವನು. ತುಂಗಾನದಿ ತೀರದಲ್ಲಿ ಬೆಳೆದವನು. ಶಿವಮೊಗ್ಗೆಯಂತಹ ಪಟ್ಟಣಕ್ಕೆ ವಿದ್ಯಾಭ್ಯಾಸ ಮತ್ತು ವೃತ್ತಿಯೊಂದಿಗೆ ನೆಲೆ ಕಂಡುಕೊಂಡು ಪರಿಸರದ ಕಾಳಜಿಯೊಂದಿಗೆ 2 ಎಕರೆ ಪ್ರದೇಶದಲ್ಲಿ ಸುಮಾರು 2000 ವಿವಿಧ ಜಾತಿಯ ಸಸಿಗಳನ್ನು ನೆಟ್ಟು ಪೋಷಿಸಿ ಈಶ್ವರವನ ಎಂಬ ಕಲ್ಪನೆಯೊಂದಿಗೆ ಆರಂಭ ಮಾಡಿದ್ದು ಈಗ ಗಿಡಗಳು ಸಾಕಷ್ಟು ಬೆಳೆದಿದೆ. ಈ ಬಗ್ಗೆ ನಮ್ಮ ಮಕ್ಕಳಿಗೆ ಅರಿವು ಜಾಗೃತಿ ಮೂಡಿಸುವ ಕಾರ್ಯವಾಗುತ್ತಿದೆ. ನಮ್ಮ ಭಾರತದ ಧಾರ್ಮಿಕ ಆಚರಣೆ ಪ್ರಕೃತಿಯಲ್ಲಿದೆ. ಉದಾಹರಣೆಗೆ ಗಣಪತಿ–ಅಂದರೆ ಭೂಮಿ. ಗಣಪತಿಗೆ ಗರಿಕೆ ಇಟ್ಟು ಪೂಜೆ ಸಲ್ಲಿಸುತ್ತೇವೆ. ಗರಿಕೆ ಸಸ್ಯ ಸಂಕುಲವನ್ನು ಸೂಚಿಸುತ್ತದೆ. ಇಲ್ಲಿ ಪೂರ್ವಜರ ಚಿಂತನೆ ಅಡಗಿದೆ ಎಂದರು. ನಮ್ಮ ಪೂಜಾ ಪದ್ಧತಿ, ಪಂಚೋಪಚಾರ, ಷೋಡಷೋಪಚಾರ ಪೂಜಾ ಪದ್ಧತಿಗಳು, ಅಥರ್ವಶೀರ್ಷ, ನಮ್ಮ ಮಂತ್ರಗಳಲ್ಲಿಯೂ ಸಹ ಪ್ರಕೃತಿ ವರ್ಣನೆ ಇದೆ. ಪ್ರಕೃತಿಯೇದೇವರು, ಪ್ರಕೃತಿಯಲ್ಲಿಯೇ ಪರಮಾತ್ಮನನ್ನು ಕಾಣಬೇಕು. ಗಿಡಮರಗಳನ್ನು ನೆಡುವುದರಿಂದ ಒಂದು ಯಜ್ಞ ಮಾಡಿದಷ್ಟೇ ಪುಣ್ಯ ಲಭಿಸುವುದೆಂದು ಪ್ರಾಜ್ಞರು ಹೇಳುತ್ತಾರೆ ಎಂದು ತಿಳಿಸಿ, ಪ್ರಕೃತಿಯನ್ನು ಆರಾಧಿಸಿ, ಉಳಿಸಿ, ಬೆಳೆಸಿ ಎಂದರು.

* ಶ್ರೀಮತಿ ಶ್ರೀದೇವಿ ಭಟ್‌ರವರಿಂದ ಪರಿಸರಗೀತೆ – ಮಳೆ ಸುರಿಯಲಿ, ಹೊಳೆ ಹರಿಯಲಿ, ತಿಳಿಯಾಗಲಿ ಮೋಡ.

ಮಾಜಿ ಅಧ್ಯಕ್ಷರಾದ ರೊ.ಡಿ.ಎಲ್. ಮಂಜುನಾಥ್‌ರವರು ಪರಿಸರ ಕಾಳಜಿಯ ಬಗ್ಗೆ ತಾವು ಕೈಗೊಂಡ ಕಾರ್ಯಕ್ರಮಗಳ ಬಗ್ಗೆ ಮಾತನಾಡುತ್ತಾ – ಪರಿಸರಎನ್ನುವ ಪದ ಮಧುರವಾದರೂ ಅದು ಅಷ್ಟೇ ಕಠಿಣತಮವಾಗಿರುತ್ತದೆ. ರೊ. ಎಂ.ವಿ. ನಾಗೇಶ್‌ರವರ ಕಾರ್ಯಗಳನ್ನು ಉಲ್ಲೇಖಿಸಿ ರೊ. ಮಂಜುನಾಥರವರು, ಈ ಹಿಂದೆ ನಮಗೆ ಈ ಬಗ್ಗೆ ಅಷ್ಟೊಂದು ಚಿಂತನೆ ಇರಲಿಲ್ಲ. ಮನೆತನದಿಂದ ಬಂದ ವ್ಯಾಪಾರ ವ್ಯವಹಾರದಲ್ಲೇ ತೊಡಗಿಕೊಂಡಿದ್ದೆವು. ಶರಣ್ಯದಂತಹ ಸಂಸ್ಥೆ ಕಟ್ಟಿದ ಮೇಲೆ (ರೋಟರಿಯಿಂದ ಸಾಕಷ್ಟು ನೆರವನ್ನು ಶರಣ್ಯ ಸಂಸ್ಥೆ ಪಡೆದಿದ್ದು ಒಳ್ಳೆಯ ರೂಪುರೇಷೆ ಪಡೆದಿದೆ) ಆ ಬಗ್ಗೆ ಚಿಂತನೆಗಳಾದವು. 10.5 ಎಕರೆ ಶರಣ್ಯಕ್ಕಾಗಿ ಖರೀದಿಸಿದ ಮೇಲೆ ನಿವೇಶನದ ಸುತ್ತಲೂ ಸಾಗುವಾನಿ ಬೆಳೆಸಿದೆವು. ಅದು ಕಷ್ಟವಾಯಿತು. ಗಿಡ ನೆಡುವುದೂ ಸಹ ಪರಿಸರದ ಒಂದು ಭಾಗ. ನೀರು, ಗಾಳಿ, ಪರಿಸರ ಇನ್ನೊಂದು ಭಾಗ. ಮುಂದಿನ ಜನಾಂಗಕ್ಕೆ ನಾವು ಎಂಥಹ ಪರಿಸರ ಕೊಡುತ್ತೇವೋ ಗೊತ್ತಿಲ್ಲ. ಎಷ್ಟು ಜನಕ್ಕೆ ಈ ಬಗ್ಗೆ ತಿಳುವಳಿಕೆ ಕೊಡಬೇಕು ಗೊತ್ತಿಲ್ಲ. ಇದೊಂದು ಬೀಕರ ಸವಾಲು. ನಾವು ಶರಣ್ಯದ ಆವರಣದಲ್ಲಿ ಗಿಡಮರಗಳನ್ನು ಸಾಕಷ್ಟು ನೆಟ್ಟಿದ್ದೇವೆ. 250 ಜಾತಿಗಿಡ ಮರಗಳಿವೆ ಎಂದು ಅರಣ್ಯ ಇಲಾಖೆಯವರು ತಿಳಿಸಿದ್ದಾರೆ. ಅದೊಂದು ನಮಗೆ ಹೆಮ್ಮೆ. ಎರಡು ವರ್ಷಗಳಿಗಾಗುವಷ್ಟು ನೀರು ಹೊಂದಿರುವ ಕರೆ ನಿರ್ಮಾಣ ಮಾಡಿದ್ದೇವೆ. ಸಸಿಗಳನ್ನು ನೆಡುವ ಬಗ್ಗೆ ಅಧ್ಯಯನ ಕೈಗೊಳ್ಳಲು ಗ್ರಹ ನಕ್ಷತ್ರಗಳಿಗನುಗುಣವಾಗಿ ಗಿಡಗಳನ್ನು ನೆಡುವ ಸಲುವಾಗಿ ಧರ್ಮಸ್ಥಳ, ರವಿಶಂಕರ ಗುರೂಜೀಯವರ ಆಶ್ರಮಕ್ಕೆ ಹಾಗೂ ಶಿರಸಿಯ ಯಲ್ಲಾಪುರದ ನಾಗೇಶ ಭಟ್‌ರಲ್ಲಿ ಭೇಟಿ ನೀಡಿ, ಮಾಹಿತಿ ಸಂಗ್ರಹಿಸಿ, ನಕ್ಷತ್ರಗಳ ರಾಶಿ, ಗ್ರಹಗಳ ವಿನ್ಯಾಸ ಇವುಗಳನ್ನೊಳಗೊಂಡಂತೆ ಅರ್ಧ ಎಕರೆ ಪ್ರದೇಶದಲ್ಲಿ ಗಿಡಗಳನ್ನು ನೆಡಲಾಗಿದೆ.


















ಒಂದೊಂದು ನಕ್ಷತ್ರಕ್ಕೆ ಒಂದೊಂದು ಗಿಡ ನೆಡಬೇಕು. ಅಮೃತಬಳ್ಳಿ, ಅಶ್ವಗಂಧ ಸಸಿಗಳನ್ನು ನೆಡಲು ಇವುಗಳಿಗೆ ಒಂದು ನಕ್ಷತ್ರ ಬೇಕು. ನಮಗೆ ಪರಿಸರದ ಕಾಳಜಿಯ ಹುಚ್ಚು ಹಿಡಿಯಿತು. ಅದರಂತೆ ಲವಂಗ ತುಳಸಿಯಂತಹ ಗಿಡ ನೆಡಲಾಗಿದ್ದು ಅದು ಮಾಮೂಲಿ ತುಳಸಿಗಿಂತ ರುಚಿ ಇರುತ್ತೆ ಎಂದರು. ಶರಣ್ಯದ ಆವರಣದಲ್ಲಿರುವ ಪ್ರತಿಯೊಂದು ಗಿಡಕ್ಕೂ ನಾಮ ಫಲಕ ಹಾಕಲಾಗಿದೆ. ಹೀಗೆ ನಾವು ಪರಿಸರದ ಚಿಂತನೆ ಮಾಡಿದ್ದೇವೆ ಎಂದರು.

* ರೊ. ಗಾಯತ್ರಿ ಸುಮತೀಂದ್ರರವರಿಂದ ಪರಿಸರಗೀತೆ– ಈ ಬಾನು ಈ ಚುಕ್ಕಿ ಈ ಹೂವು ಈ ಹಕ್ಕಿ ತೇಲಿ ಸಾಗುವ ಮುಗಿಲು ಹರುಷ ಉಕ್ಕಿ.

* ರೊ. ಎಸ್. ಮಂಜುನಾಥ್‌ರವರು ಮಾತನಾಡಿ, ಅಸ್ಸಾಂ ರಾಜ್ಯದ ಶ್ರೀ ಜಾವೇದ್ ಪಯನ್ ಎಂಬ ವ್ಯಕ್ತಿ 14 ನೂರು ಎಕರೆ ಪ್ರದೇಶದಲ್ಲಿ ಬ್ರಹ್ಮಪುತ್ರ ನದಿಯ ಪ್ರವಾಹವನ್ನು ತಡೆಯುವ ಉದ್ದೇಶದಿಂದ ಗಿಡಗಳನ್ನು ನೆಟ್ಟು ಅದು ಈಗ ದೊಡ್ಡಕಾಡಾಗಿದ್ದು, ಅವನು 'ಫಾರೆಸ್ಟ್ ಮ್ಯಾನ್ ಆಫ್ ಇಂಡಿಯಾ' ಎಂದು ಹೆಸರು ಪಡೆದಿರುವುದನ್ನು ಉಲ್ಲೇಖಿಸಿದರು. ಇವರು ಒಂದು ಸರ್ಕಾರ ಮಾಡಲಾಗದ ಕೆಲಸವನ್ನು ಮಾಡಿ ತೋರಿಸಿದ್ದಾರೆ ಎಂದರು. ಇಂಥಹವರು ನಮ್ಮ ದೇಶದಲ್ಲಿ ಬಹಳ ಜನರಿದ್ದಾರೆ ಎಂದರು.

ಇನ್ನು ತಾನು ಮಾಡಿರುವ ಕೆಲಸವೇನೆಂದರೆ, ಶಿವಮೊಗ್ಗ ನಗರಕ್ಕೆ ಸಮೀಪವಿರುವ ಕೋಟೆಗಂಗೂರು ಗ್ರಾಮದಲ್ಲಿರುವ ನನ್ನ 10 ಎಕರೆ ಭೂಮಿಯಲ್ಲಿ ಮುಖ್ಯ ಬೆಳೆಯಾಗಿ ಅಡಿಕೆಯಿದ್ದು, 170 ತೆಂಗಿನ ಮರ, 20 ನೇರಳೆ ಹಣ್ಣಿನ ಮರ, ಮುಂಬರುವ ವರ್ಷಗಳಲ್ಲಿ ಹಣ್ಣು ಬಿಡುವ ಸರದಿಗೆ ಬರುತ್ತವೆ. 10 ಹಲಸಿನ ಮರವಿದ್ದು ಇದರಲ್ಲಿ ಹಣ್ಣು ಬಿಡಲು ಪ್ರಾರಂಭವಾಗಿದೆ. 25 ಹೊಂಗೆ ಮರಗಳಿವೆ. ಅಲ್ಲದೇ 2 ಗಸೆಗಸೆ ಹಣ್ಣಿನ ಗಿಡಗಳಿವೆ. ಪ್ರಾಣಿಗಳಿಗೆ ನಾವುಗಳು ಆಹಾರ ಕೊಡಬಹುದು. ಆದರೆ ಪಕ್ಷಿಗಳಿಗೆ ನಾವು ಕೊಡುವುದು

ಕಷ್ಟಸಾಧ್ಯವಿರುವುದರಿಂದ ಈ ಹಣ್ಣಿನ ಗಿಡಗಳಿಂದ ಅವುಗಳಿಗೆ ಅನುಕೂಲವಾಗಿದೆ ಎಂದರು. ಈ ಮರಗಳಲ್ಲಿ ಪಕ್ಷಿಗಳು ಹಣ್ಣನ್ನು ಸೇವಿಸುವುದನ್ನು ನೋಡಿದಾಗಿ ನಮಗೆ ಧನ್ಯತಾ ಭಾವ ಮೂಡುವುದು ಎಂದರಲ್ಲದೇ ಇಲ್ಲಿ 20 ಸಿಲ್ವರ್ ಮರಗಳೂ ಸಹ ಇದೆ ಎನ್ನುತ್ತಾ ನಾವುಗಳೆಲ್ಲಾ ಸೇರಿ ಉತ್ತಮ ಪರಿಸರಕ್ಕಾಗಿ ಶ್ರಮಿಸೋಣ ಎಂದರು.

* ರೊ. ಕಿಶೋರ್ ಶೀರನಾಳಿಯವರು ಮಾತನಾಡಿ, ಈಗ ಮಳೆ ತುಂಬಾ ಬಂದಿದೆ. ಮಲೆನಾಡಿನಲ್ಲಿ ಜನ ವಲಸೆ ಹೋಗುತ್ತಿದ್ದಾರೆ. ಪಟ್ಟಣಗಳಿಗೆ ತೆರಳುತ್ತಾರೆ. ಮುಂದಿನ ದಿನಗಳಲ್ಲಿ ಅವರೆಲ್ಲ ಪುನಃ ವಾಪಸ್ಸು ಹಳ್ಳಿಗೆ ಬರುತ್ತಾರೆ ಎಂಬ ಗ್ಯಾರಂಟಿ ಇದೆ ಎಂದರು. ನಂತರ ಅವರು ಮಳೆ ಬರುವ ಕಾಲಕ್ಕೆ ಒಳಗ್ಯಾಕೆ ಕುಂತೇವು ಎಂಬ ಗೀತೆಯನ್ನು ಹಾಡಿದರು.

* ರೊ. ವನಿತಾ ಸಂದೀಪ್‌ರವರು "ಯಾರು ತುಳಿಯದ ಹಾದಿ ಬದಿಯಲ್ಲಿ ಮೌನದೊಳಿಹಳು ಚಲುವೆ" ಎಂಬ ಗೀತೆಯನ್ನು ಭಾವನಾತ್ಮಕವಾಗಿ ಹಾಡಿದರು. ರೊ. ಎನ್. ಜಿ. ಉಷಾರವರು ಪರಿಸರದ ಮೇಲಿನ ರಸ ಪ್ರಶ್ನೆ ಕಾರ್ಯಕ್ರಮವೊಂದನ್ನು ನಡಸಿಕೊಟ್ಟರು. ಮೊದಲಿಗೆ ಅವರು ಸ್ಲೋಗನ್‌ಗಳನ್ನು ಓದಿದರು. ಅವುಗಳನ್ನು ಪುನಃ ಹೇಳುವ ಸ್ಪರ್ಧೆಯನ್ನು ನಡೆಸಲಾಯಿತು. ಅವುಗಳು ಇಂತಿವೆ.

*** ಕಾಡು ಬೆಳೆಸಿ ನಾಡು ಉಳಿಸಿ * ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ * ಹಸಿರೇ ಉಸಿರು * ಭೂಮಿ ಹಸಿರಾಗಿದ್ದರೆ ಬದುಕು ಹಸಿರು * ಮನೆಗೊಂದು ಮರ ಊರಿಗೊಂದು ವನ * ಅರಣ್ಯ ನಾಶ ಜಗತ್ತಿನ ವಿನಾಶ * ಪ್ರಕೃತಿ ಮಾತೆ ಅನ್ನದಾತೆ * ಕೇಕ್ ಬಿಡಿ, ಗಿಡ ನೆಡಿ * ಪ್ಲಾಸ್ಟಿಕ್ ತ್ಯಜಿಸಿ, ಜೀವ ಉಳಿಸಿ * ನೀರನ್ನು ಉಳಿಸಿ, ಭವಿಷ್ಯ ಸುರಕ್ಷಿತಗೊಳಿಸಿ * ಒಂದು ಭೂಮಿ ಒಂದು ಅವಕಾಶ * ವನ್ಯಜೀವ ರಕ್ಷಿಸಿ, ಜೀವ ವೈವಿಧ್ಯ ಸಂರಕ್ಷಿಸಿ * ಪ್ರಕೃತಿಯನ್ನು ಪೋಷಿಸಿ, ಭವಿಷ್ಯವನ್ನು ರೂಪಿಸಿ * ಮಾಲಿನ್ಯ ನಿಲ್ಲಿಸಿ, ಬದುಕಲು ಪ್ರಾರಂಭಿಸಿ * ಅರಣ್ಯ ಇಲ್ಲದೇ ಮಳೆ ಇಲ್ಲ. ಮಳೆ ಇಲ್ಲದೇ ಬೆಳೆ ಇಲ್ಲ * ಜಲವನ್ನು ಉಳಿಸಿ, ಜೀವವನ್ನು ಸಂರಕ್ಷಿಸಿ * ಅಕ್ಷರ ಅನ್ನ ಪರಿಸರ ಚಿನ್ನ * ನೀರಿಗೆ ನೈದಿಲೆ ಶೃಂಗಾರ, ನಾಡಿಗೆ ಕಾಡೇ ಬಂಗಾರ * ಹನಿ ನೀರು ಉಳಿಸಿ ಮಳೆ ನೀರು ಬಳಸಿ.**

ಇದರಲ್ಲಿ ರೊ.ಗಾಯತ್ರಿ ಸುಮತೀಂದ್ರ, ರೊ.ಶೋಭಾ ರುದ್ರೇಶ್ ಮತ್ತು ರೊ. ಸಿ. ವಿಜಯಕುಮಾರ್‌ರವರು ಭಾಗವಹಿಸಿ ಬಹುಮಾನ ಪಡೆದರು. ರೊ. ಎನ್.ವಿ.ಭಟ್‌ರವರು ಮತನಾಡಿ ತಮ್ಮ 50 ನೇ ಹುಟ್ಟು ಹಬ್ಬಕ್ಕೆ 50 ಗಿಡ ನೆಡಿಸಿದೆ. ನೀರು ಹಾಕಿಸಿದೆ. ಈಗ 25 ಮರಗಳು ಉಳಿದು ಬೆಳೆದಿದೆ. 60 ನೇ ವರ್ಷಕ್ಕೆ ಸಂಪಿಗೆ ಗಿಡ ಹಾಕಿಸಿದೆ. 9 ಗಿಡಗಳು ಬಂದಿದೆ. 25 ಹೊಂಗೆ ಗಿಡ ನೆಡಿಸಿದ್ದೇನೆ. ಹೊರಗಡೆ ಹೋಗುವಾಗ ಕೈಚೀಲ ತೆಗೆದುಕೊಂಡು ಹೋಗುತ್ತೇನೆ. ಹಲವಾರು ಚೀಲಗಳನ್ನು ಇಟ್ಟುಕೊಂಡಿರುತ್ತೇನೆ. ಪುನಃ ಬಳಸಲು ಉಪಯೋಗವಾಗುವಂತೆ, ನನ್ನ ಅಧ್ಯಕ್ಷಾವಧಿಯಲ್ಲಿ ಸ್ಟೀಲಿನ ತಟ್ಟೆ ಲೋಟಗಳನ್ನು ರೊ. ಎಂ.ವಿ. ನಾಗೇಶರವರಲ್ಲಿರಿಸಿದ್ದೇವೆ. ಬಳಸಿಕೊಳ್ಳಬಹುದು ಎಂದರು. ರೊ. ಉಷಾ ಭಟ್‌ರವರು ಮಾತನಾಡಿ, ಮನೆಗೆ ಪ್ಲಾಸ್ಟಿಕ್ ಕವರ್‌ನಲ್ಲಿ ಬರುವ ದಿನಸಿಗಳನ್ನು ತೆಗೆದಿಟ್ಟು ಪ್ಲಾಸ್ಟಿಕ್‌ಗಳನ್ನು ರೋಲ್ ಮಾಡಿ ಪುನಃ ಅಂಗಡಿಗೆ ಕೊಡುತ್ತಿದ್ದೇವೆ ಎಂದು ಮಾಹಿತಿ ನೀಡಿದರು.

**ವಿವಾಹ ವಾರ್ಷಿಕೋತ್ಸವ :** ಈ ನಮ್ಮ ಕೆಳಕಂಡ ಸದಸ್ಯರುಗಳುಈ ತಿಂಗಳು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಿಕೊಂಡಿದ್ದು, ವಾಡಿಕೆಯಂತೆ ನಮ್ಮ ಕ್ಲಬ್‌ನಲ್ಲಿ ರೋಟರಿ ಕೌಟುಂಬಿಕ ಸ್ನೇಹಮಿಲನ ಕಾರ್ಯಕ್ರಮದಲ್ಲಿ ವೇದಿಕೆಗೆ ಆಹ್ವಾನಿಸಿ, ಅಭಿನಂದಿಸಲಾಯಿತು.

ರೊ. ಸುಮಲತಾ ಭೂಪಾಳಂ, ರೊ. ವಿಜಯಕುಮಾರ್ ಮತ್ತು ಶ್ರೀಮತಿ ಗೌರಿ, ರೊಕಿಶೋರ್ ಶೀರನಾಳಿ, ರೊ.ಅನುರಾಧ ಶೀರನಾಳಿ ಮತ್ತು ರೊ.ಶ್ರೀನಿವಾಸ್ ಮತ್ತು ಶ್ರೀಮತಿ ನಾಗರತ್ನ. ಇವರುಗಳು ಸಂಗೀತದ ಹಿನ್ನೆಲೆಯಲ್ಲಿ ರೋಟರಿ ದಂಪತಿಗಳು ಪರಸ್ಪರ ಮಾಲೆ ಬದಲಾಯಿಸಿಕೊಂಡರು. ರೊ. ಕಿಶೋರ್ ಶೀರನಾಳಿ ಮತ್ತು ರೊ. ಅನುರಾಧ ದಂಪತಿಗಳು ಸಂಗೀತಕ್ಕೆ ಮನಸೋತು ವೇದಿಕೆಯಲ್ಲಿ ನೃತ್ಯ ಮಾಡುವುದರ ಮೂಲಕ ತಮ್ಮ ಸಂತೋಷ ವ್ಯಕ್ತಪಡಿಸಿದರು. ಕೊನೆಯಲ್ಲಿ ರೊ.ಶಾರದಾ ಗೋಪಾಲ್‌ರವರಿಂದ ವಂದನಾರ್ಪಣೆಯಾಯಿತು. ರಾಷ್ಟ್ರಗೀತೆಯೊಂದಿಗೆ ಸಂಪನ್ನಗೊಂಡ ಸಭೆ ಭೋಜನಕೂಟದೊಂದಿಗೆ ಮುಕ್ತಾಯವಾಯಿತು.




ದಿನಾಂಕ: 26.07.2024 ರಂದು ವಿದ್ಯಾನಗರದ ತುಂಗಾ ಪ್ರೌಢಶಾಲೆಯಲ್ಲಿ ಇಂಟರ್ ಆಕ್ಟ್ ಕ್ಲಬ್ ಪದವಿ ಸ್ವೀಕಾರ ಸಮಾರಂಭ ನಡೆಯಿತು. ಕ್ಲಬ್ ಅಧ್ಯಕ್ಷರಾದ ರೊ. ಕೆ. ಸೂರ್ಯನಾರಾಯಣ ಉಡುಪ, ಕಾರ್ಯದರ್ಶಿ, ರೊ. ಎನ್.ಜಿ. ಉಷಾ, ಇಂಟರ್ ಆಕ್ಟ್ ಕ್ಲಬ್‌ನ ಚೇರ್‌ಮನ್ ರೊ. ಗಾಯಿತ್ರಿ ಸುಮತೀಂದ್ರ, ರೊ, ಕಿಶೋರ್ ಶೀರ್ನಾಳಿ, ರೊ. ವೀರಣ್ಣ ಎ. ಹುಗ್ಗಿ ಭಾಗವಹಿಸಿದ್ದರು.







ದಿನಾಂಕ: 29.07.2024 ರ ಸೋಮವಾರದಂದು ಮಧ್ಯಾಹ್ನ ರೋಟರಿ ಡಿಸ್ಟ್ರಿಕ್ಟ್ ಪ್ರಾಜೆಕ್ಟ್ ಅನ್ವಯ ಆದಿ ಚುಂಚನಗಿರಿ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ಆರೋಗ್ಯ ಭಾರತಿ ಸಂಸ್ಥೆಯ ಸಹಯೋಗದೊಂದಿಗೆ ಆರೋಗ್ಯ ತಿಳುವಳಿಕಾ ಶಿಬಿರವನ್ನು ನಡೆಸಲಾಯಿತು. ಡಾ. ಪಲ್ಲವಿಯವರು ಮಕ್ಕಳಿಗೆ ಡೆಂಗ್ಯೂ, ಚಿಕನ್‌ಗೂನ್ಯ ಮತ್ತಿತರ ಕಾಯಿಲೆಗಳನ್ನು ತಡೆಗಟ್ಟುವ ಬಗ್ಗೆ ತಿಳಿಸಿದರು. ಅಲ್ಲದೇ ಆರೋಗ್ಯ ಸಸ್ಯಗಳ ಬಗ್ಗೆಯೂ ವಿವರಿಸಿದರು. ಡಿಸ್ಟ್ರಿಕ್ ಪ್ರಾಜೆಕ್ಟ್ ನಿರ್ದೇಶಕರಾದ ರೊ. ವೀರಣ್ಣ ಎ. ಹುಗ್ಗಿ, ಕಾರ್ಯದರ್ಶಿ ರೊ. ಎನ್.ಜಿ ಉಷಾ ಮತ್ತು ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರವರು ಶಾಲೆಯ ಇನ್‌ಚಾರ್ಜರವರು ವೇದಿಕೆಯಲ್ಲಿದ್ದರು.

### ಹೊಸ ಸದ್ಯರುಗಳಿಗೆ ರೋಟರಿ ಓರಿಯಂಟೇಶನ್ ಕಾರ್ಯಕ್ರಮ

**ದಿನಾಂಕ: 04.08.2024 ರಂದು ನೂತನ ಸದಸ್ಯರುಗಳಿಗೆ ಓರಿಯಂಟೇಷನ್ ಕಾರ್ಯಕ್ರಮವನ್ನು ನಮ್ಮ ರೋಟರಿ ಯುವ ಕೇಂದ್ರದಲ್ಲಿ ಏರ್ಪಡಿಸಲಾಗಿದ್ದು, ಕಳೆದ 3 ವರ್ಷಗಳಿಂದ ನಮ್ಮ ಕ್ಲಬ್‌ನಲ್ಲಿರುವ ನೂತನ ಸದಸ್ಯರುಗಳು ಭಾಗವಹಿಸಲು ಕೋರಲಾಗಿದೆ. ಅಲ್ಲದೇ ಎಲ್ಲಾ ಸದಸ್ಯರುಗಳನ್ನು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮನವಿ ಮಾಡುತ್ತಿದ್ದೇವೆ. ಅಂದು ಬೆಳಿಗ್ಗೆ 8.30 ಯಿಂದ 9.00 ರವರೆಗೆ ಉಪಹಾರ 9.00 ಕ್ಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ದಯಮಾಡಿ ಎಲ್ಲಾ ಸದಸ್ಯರು ಬನ್ನಿ.**



## ಸಂಪಾದಕೀಯ

## ಕಲೆಯ ಮಹತ್ವ

ಒಂದು ದಿನ ಖ್ಯಾತ ಕಲಾವಿದ ರಾಜಾ ರವಿವರ್ಮ ನಗರ ಸಂಚಾರ ಮಾಡುವಾಗ ಒಬ್ಬ ಸುಂದರ ಯುವತಿ ಅವನನ್ನು ಗುರುತಿಸಿ, ನೀವು ನನಗಾಗಿ ಒಂದು ಚಿಕ್ಕ ಚಿತ್ರವನ್ನು ಬಿಡಿಸಿ ಕೊಡುವಂತೆ ಮನವಿ ಮಾಡಿಕೊಳ್ಳುತ್ತಾಳೆ !

ರವಿವರ್ಮ ಆಶ್ಚರ್ಯ ವ್ಯಕ್ತಪಡಿಸಿ, ಈ ಕೂಡಲೇ ಅದೂ ಬಜಾರ (ರಸ್ತೆ) ದಲ್ಲಿ ಹೇಗೆ ಸಾಧ್ಯ ? ಪ್ರಶ್ನಿಸಿದರು. ಮುಂದಿನ ದಿನಗಳಲ್ಲಿ ಭೇಟಿಯಾದಾಗ ಖಂಡಿತಾ ಬಿಡಿಸಿ ಕೊಡುತ್ತೇನೆ ಎಂದರೂ, ಪಟ್ಟು ಬಿಡದೆ ಈಗಲೇ ಬೇಕೆಂದು ಹಠ ಹಿಡಿದು ಅಂಗಲಾಚಿದಾಗ ಬೇರೆ ದಾರಿ ಕಾಣದೆ ಆ ಕ್ಷಣಕ್ಕೆ ಒಂದು ಚಿತ್ರವನ್ನು ಬಿಡಿಸಿಕೊಡುವಾಗ ನಗುತ್ತಾ ಹೇಳುತ್ತಾನೆ. ಇದರ ಬೆಲೆ ಕೋಟಿ ರೂಪಾಯಿಗೂ ಅಧಿಕ, ಜಾಗೃತೆಯಿಂದ ಕಾಪಾಡಲು ಹೇಳಿ ಹೋಗುತ್ತಾನೆ !!

ಆ ಯುವತಿ ಆಶ್ಚರ್ಯದಿಂದ ಚಿತ್ರನೋಡಿ, ಮರುದಿನವೇ ಪೇಟೆಗೆ ಹೋಗಿ ಪ್ರಮುಖ ಚಿತ್ರಕಾರರ ಚಿತ್ರಗಳನ್ನು ಮಾರುವ ಒಬ್ಬ ವ್ಯಕ್ತಿಯ ಹತ್ತಿರ ಹೋಗಿ ರವಿವರ್ಮ ಚಿತ್ರಿಸಿ ಕೊಟ್ಟ ಚಿತ್ರದ ಬೆಲೆ ಎಷ್ಟಿರಬಹುದು? ಎಂದು ಕೇಳುತ್ತಾಳೆ. ಅವನೂ ಸಹ ರವಿವರ್ಮ ಹೇಳಿದ ಮಾತನ್ನೇ ಹೇಳುತ್ತಾನೆ. ಕೋಟಿ ರೂಪಾಯಿಗೂ ಹೆಚ್ಚು ಎಂದು!! ಆ ಚಿತ್ರದ ಬೆಲೆ ಕೇಳಿ ಯುವತಿಯ ಬಾಯಿಂದ ಮಾತೇ ಹೊರಡಲಿಲ್ಲ. ಆ ತಕ್ಷಣವೇ ಮತ್ತೆ ರವಿವರ್ಮರನ್ನು ಭೇಟಿಯಾಗಲು ಹೊರಟಳು.

ರವಿವರ್ಮರನ್ನು ಭೇಟಿಯಾಗಿ ನೀವು ಹತ್ತೇ ನಿಮಿಷದಲ್ಲಿ ಚಿತ್ರಿಸಿದ ಈ ಚಿತ್ರ ಇಷ್ಟೊಂದು ಬೆಲೆ ಬಾಳುವುದೆಂದು ಗೊತ್ತಿರಲಿಲ್ಲ! ನನಗೂ ಸಹ ಈ ಚಿತ್ರಕಲೆಯನ್ನು ಕಲಿಸಿಕೊಡಿ, ನಿಮ್ಮಂತೆ ಹತ್ತೇ ನಿಮಿಷದಲ್ಲಿ ಆಗದಿದ್ದರೂ ಹತ್ತು ದಿನಕ್ಕೆ ಒಂದು ಚಿತ್ರವನ್ನಾದರೂ ಬಿಡಿಸುವೆ ಎನ್ನುತ್ತಾಳೆ!!

ರವಿವರ್ಮ ನಗುತ್ತಾ ಸುಂದರಿ ! ನಿನಗಾಗಿ ಹತ್ತೇ ನಿಮಿಷದಲ್ಲಿ ಚಿತ್ರವನ್ನು ಬಿಡಿಸಿ ಕೊಟ್ಟೆ. ನಿಜ, ಆದರೆ ಅದರ ಹಿಂದೆ ನನ್ನ "ಮೂವತ್ತು ವರ್ಷಗಳ" ಕಠಿಣವಾದ ಪರಿಶ್ರಮವಿದೆ!! ನೀನೂ ಸಹ "ನಿನ್ನ ಮೂವತ್ತು ವರ್ಷಗಳನ್ನು" ಈ ಕಲೆಗಾರಿಕೆಗೆ ತ್ಯಾಗ ಮಾಡಿದರೆ, ನನಗಿಂತ ಎತ್ತರಕ್ಕೆ ಬೆಳೆಯಬಲ್ಲೆ! ರವಿವರ್ಮರ ಮಾತನ್ನು ಕೇಳಿ ಆ ಯುವತಿ "ಗರಬಡಿದಂತೆ" ನಿಂತು ಬಿಟ್ಟಳು.

ಅಂದರೆ, ಒಬ್ಬ ಮೇಷ್ಟು ಅಥವಾ ಉಪನ್ಯಾಸಕ 45 ನಿಮಿಷದ ಪಾಠದ ಹಿಂದೆ ಕೂಡ ಅವನ ಜೀವನದ ಎಷ್ಟೋ ವರ್ಷಗಳ ಕಠಿಣ ಸಾಧನೆ ಇರುತ್ತದೆ!! ತಂದೆ ತಾಯಿ ನಮಗಾಗಿ ನಮ್ಮ ಒಳಿತಿಗಾಗಿ ಹೇಳಿದ ಮಾತು, ನಿಮ್ಮ ಊಹೆಗೂ ನಿಲುಕದ ಅವರ "ಪ್ರೀತಿ-ತ್ಯಾಗ" ದ ಹಿಂದೆ ಸಾಕಷ್ಟು ವರ್ಷ ಕಳೆದ ಅನುಭವದ, ಕಷ್ಟದ ಸರಮಾಲೆಯೇ ಇರುತ್ತದೆ! ಹಾಗೆಯೇ ಒಬ್ಬ ಬ್ರಹ್ಮಜ್ಞಾನಿ ಅಥವಾ ಸದ್ಗುರುಗಳ ಜೊತೆ ಕಳೆದ ಕೆಲವೇ ಕೆಲವು ಕ್ಷಣ ನಿಮ್ಮ ಜೀವನವನ್ನು ಬದಲಾಯಿಸಬಹುದು.

• ರೊ. ಎಂ. ಮಾಧವಾಚಾರ್


## Happy Birthday Wishes



*Kalamrutha*
*5th Aug*



*Sharada Gopal*
*06th Aug*



*Dr. R. D. Prabhu*
*09th Aug*

### ಚಿಂತನ...

**ಪರಿಸರ ಸಂರಕ್ಷಣೆ ನಮ್ಮ ಹೊಣೆ. ಭೂಮಿ ಹಸಿರಾಗಿದ್ದರೆ ಬದುಕು ಹಸಿರು. ಇತ್ತೀಚಿನ ದಿನಗಳಲ್ಲಿ ಜನ್ಮದಿನದಂದು ಕೇಕ್ ಕತ್ತರಿಸುತ್ತಾರೆ. ಕೇಕ್ ಉಪಯೋಗಿಸುವ ಬದಲು ಗಿಡ ನೆಡೋಣ. ಪ್ರಕೃತಿ ಮಾತೆಯೇ ಅನ್ನದಾತೆಯಲ್ಲವೇ? ಇದರ ಬಗ್ಗೆ ಇಂದಿನ ಯುವ ಜನಾಂಗಕ್ಕೆ ತಿಳಿಸುವುದು ನಮ್ಮೆಲ್ಲರ ಕರ್ತವ್ಯ.**

**- ರೊ. ಎನ್.ಜಿ. ಉಷಾ**



ದಿನಾಂಕ: 30-07-2024 ತಾಯಿ ಮತ್ತು ಮಗುವಿನ ಆರೋಗ್ಯ ರಕ್ಷಣೆಯ ಬಗ್ಗೆ ಉಪನ್ಯಾಸ ಕಾರ್ಯಕ್ರಮ ಹಾಗೂ ಧ್ಯಾನ ಏರ್ಪಡಿಸಲಾಗಿತ್ತು. ರೋಟರಿ ಯೂಥ್ ಸೆಂಟರ್ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಡಾ. ಕಾಂಚನ ಕುಲಕರ್ಣಿ, ಡಾ. ಬೃಂದ, ಶ್ರೀಮತಿ ಯಶಸ್ವಿನಿ, ಶ್ರೀಮತಿ ಚಂದ್ರಕಲಾ ಅತಿಥಿ ಉಪನ್ಯಾಸಕರಾಗಿ ಮಾರ್ಗದರ್ಶನ ನೀಡಿದರು. ಈ ಕಾರ್ಯಕ್ರಮದಲ್ಲಿ ಕ್ಲಬ್ ಅಧ್ಯಕ್ಷರಾದ ಸೂರ್ಯನಾರಾಯಣ ಉಡುಪ ಕಾರ್ಯದರ್ಶಿ ಎನ್.ಜಿ. ಉಷಾ ವೀರಣ್ಣ ಹುಗ್ಗಿ ಜ್ಯೋತಿ ಪವಾರ್ ಭಾಗವಹಿಸಿದ್ದರು.

### ವಿಶೇಷ ಪ್ರಕಟಣೆ

**ದಯಮಾಡಿ ಸದಸ್ಯರು 2024-25 ನೇ ಸಾಲಿನ ತಮ್ಮ ಸದಸ್ಯತ್ವ ಶುಲ್ಕವನ್ನು ಪಾವತಿ ಮಾಡಬೇಕಾಗಿ ವಿನಂತಿ.**

**-ರೊ. ಕೆ. ಸೂರ್ಯನಾರಾಯಣ ಉಡುಪ**

| | July - 2024 |
|---|---|
| 6-7-2024 | Press Meet |
| 8-7-2024 | Installation Ceremony |
| 10-7-2024 | Weekly Meeting :<br>Guest Speaker<br>Sri Vinayananda Saraswathi Swamiji |
| 15-7-2024 | Board Meeting - Aproval of Budget |
| 17-7-2024 | Weekly Meeting - Budget |
| 22-7-2024 | Interact Club Installation in Veena Sharada High School<br>& Distribution of Note Books |
| 23-7-2024 | Interact Club Installation in Mahaveera High School |
| 24-7-2024 | Weekly Meeting<br>Spekar - Dr. Shunya Sampad |
| 26-7-2024 | Interact Club Installation in Tunga High School - Vidyanagara |
| 29-7-2024 | Dengue Prevention & Health Awareness Program for Students in Adichunchanagiri School |
| 30-7-2024 | Mother & Child - Health Awarenesss Program for LBS Nagara Women |
| 31-7-2024 | Family Meet Programme<br>Theme - Go Green - 'ಹಸಿರೇ ಉಸಿರು' |

To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495